ಕೆ.ಹೆಚ್.ಎಸ್.ಡಿ.ಆರ್.ಪಿ. ಅಡಿಯಲ್ಲಿ ಕೇವಲ 49 ವಿವಿಧ ತಜ್ಞತೆ ಹೊಂದಿರುವ ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಒಟ್ಟಾರೆ, ಸರ್ಕಾರಿ ಆಸ್ಪತ್ರೆ/ಕೇಂದ್ರಗಳಲ್ಲಿ ತಜ್ಞ ವೈದ್ಯರು ಕರ್ತವ್ಯ ನಿರ್ವಹಿಸಲು ಮುಂದೆ ಬರುತ್ತಿರುವವರ ಸಂಖ್ಯೆ ಉತ್ತೇಜನಕಾರಿಯಾಗಿಲ್ಲ.

4. ಎಂ.ಬಿ.ಬಿ.ಎಸ್. ವೈದ್ಯರಿಗೆ ಅರವಳಿಕೆ ಹಾಗೂ ಸಿಜೇರಿಯನ್ ಶಸ್ತ್ರಚಿಕಿತ್ಸೆಗಳಿಗೆ ತರಬೇತಿ ನೀಡಲಾಗುತ್ತಿದ್ದು, ಈ ಮೂಲಕ ಸ್ತ್ರೀರೋಗ ಹಾಗೂ ಅರವಳಿಕೆ ತಜ್ಞರ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗಿದೆ.

5. ಕರ್ನಾಟಕ ಲೋಕಸೇವಾ ಆಯೋಗದ ಮೂಲಕ 600 ತಜ್ಞ ವೈದ್ಯರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಇತ್ತೀಚೆಗೆ ಕ್ರಮ ಕೈಗೊಳ್ಳಲಾಗಿ ಒಟ್ಟು 252 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಆಯ್ಕೆಯಾದ ಎಲ್ಲಾ 252 ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿ ಮಾಡಲು ಕ್ರಮ ಕೈಗೊಳ್ಳಲಾಗಿ, ಕೇವಲ 137 ಅಭ್ಯರ್ಥಿಗಳು ಸ್ಥಳ ಆಯ್ಕೆ ಮಾಡಿಕೊಂಡರು. ಆ ಪೈಕಿ ಕೇವಲ 75 ಅಭ್ಯರ್ಥಿಗಳು ಮಾತ್ರ ಕಾರ್ಯವರದಿ ಮಾಡಿಕೊಂಡಿದ್ದಾರೆ.

6. ಎಂ.ಬಿ.ಬಿ.ಎಸ್. ವಿದ್ಯಾರ್ಹತೆಯ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಒಟ್ಟು 2586 ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ 2390 ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. (ಇತ್ತೀಚೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ವೈದ್ಯರು ಸೇರಿದಂತೆ) ಹಾಗು 196 ಹುದ್ದೆಗಳು ಖಾಲಿಯಿವೆ. ದಿನಾಂಕ : 27-06-2012 ರಂದು ಒಟ್ಟು 155 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಲು ಜಿಲ್ಲಾಧಿಕಾರಿಗಳಿಗೆ ಸರ್ಕಾರವು ಅನುಮತಿ ನೀಡಿದೆ.

**ಮಂಡ್ಯ ನಗರದ ಪೊಲೀಸ್ ಕಾಲೋನಿಯಲ್ಲಿರುವ ಪದವಿ ಪೂರ್ವ ಕಾಲೇಜು**

**303 (372) ಶ್ರೀ ಶ್ರೀನಿವಾಸ್ ಎಂ. (ಮಂಡ್ಯ)** :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಮಂಡ್ಯ ನಗರದ ಪೊಲೀಸ್ ಕಾಲೋನಿಯಲ್ಲಿರುವ ಪದವಿ ಪೂರ್ವ ಕಾಲೇಜಿಗೆ ಸ್ವಂತ ಕಟ್ಟಡವಿಲ್ಲದೇ ಪ್ರೌಢ ಶಾಲಾ ಕಟ್ಟಡದಲ್ಲಿ ತರಗತಿಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಈ ಪದವಿ ಪೂರ್ವ ಕಾಲೇಜಿಗೆ ಪ್ರಯೋಗ ಶಾಲೆ ಮತ್ತು ಪೀಠೋಪಕರಣಗಳ ಕೊರತೆಯಿದ್ದು, ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಪದವಿ ಪೂರ್ವ ಕಾಲೇಜಿಗೆ ಸ್ವಂತ ಕಟ್ಟಡ, ಪ್ರಯೋಗ ಶಾಲೆ, ಅಗತ್ಯವಿರುವ ಪೀಠೋಪಕರಣಗಳ ಪೂರೈಕೆ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಈ) ಯಾವಾಗ ಈ ಸೌಲಭ್ಯಗಳನ್ನು ಕಲ್ಪಿಸಲಾಗುವುದು ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಬಂದಿದೆ.

ಆ) ಬಂದಿದೆ.

ಇ) ಸದರಿ ಕಾಲೇಜು ಸಂಯುಕ್ತ ಪದವಿ ಪೂರ್ವ ಕಾಲೇಜಾಗಿರುವುದರಿಂದ ಪ್ರೌಢಶಾಲಾ ಕಟ್ಟಡದಲ್ಲಿ ಪ್ರೌಢಶಾಲೆ ಹಾಗೂ ಕಾಲೇಜು ವಿಭಾಗದ ತರಗತಿಗಳನ್ನು ಪಾಳಿ ಪದ್ಧತಿಯಲ್ಲಿ ನಡೆಸಲಾಗುತ್ತಿದೆ.

ಸದರಿ ಕಾಲೇಜಿಗೆ ವಿಜ್ಞಾನ ಸಂಯೋಜನೆಯನ್ನು 2008–09 ನೇ ಸಾಲಿನಿಂದ ಪ್ರಾರಂಭಿಸಲು ಅನುಮತಿ ನೀಡಲಾಗಿದೆ. ವಿದ್ಯಾರ್ಥಿಗಳ ದಾಖಲಾತಿ ವಿವರ ಈ ಕೆಳಗಿನಂತಿದೆ.

| ತರಗತಿ | 2009–10 | 2010–11 | 2011–12 | 2012–13 |
|---|---|---|---|---|
| ಪ್ರಥಮ ಪಿಯುಸಿ | 20 | 31 | 24 | 25 |
| ದ್ವಿತೀಯ ಪಿಯುಸಿ | 13 | 09 | 25 | 24 |
| **ಒಟ್ಟು** | **33** | **40** | **49** | **49** |

ಹಿಂದಿನ ವರ್ಷಗಳಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಪ್ರೌಢಶಾಲಾ ಕಟ್ಟಡದ ಕೊಠಡಿಯಲ್ಲಿ ಪ್ರಯೋಗಶಾಲೆಯನ್ನು ಸಜ್ಜುಗೊಳಿಸಲಾಗಿತ್ತು. ಅದೇರೀತಿ ಈ ವರ್ಷವೂ ಸಹ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಪ್ರೌಢಶಾಲಾ ಕಟ್ಟಡದ 02 ಕೊಠಡಿಗಳಲ್ಲಿ ಪ್ರಯೋಗಶಾಲೆಯನ್ನು ಸಜ್ಜುಗೊಳಿಸಲಾಗಿದೆ ಮತ್ತು ಪ್ರಯೋಗಶಾಲಾ ಉಪಕರಣಗಳನ್ನು ಖರೀದಿಸುವ ಉದ್ದೇಶಕ್ಕೆ ಕಳೆದ 02 ವರ್ಷಗಳಲ್ಲಿ ರೂ. 1,80,000–00 ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಸದರಿ ಕಾಲೇಜಿಗೆ ಸ್ವಂತ ಕಟ್ಟಡ, ಪ್ರಯೋಗಾಲಯ ಕೊಠಡಿ ಹಾಗೂ ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಕುರಿತು ಅನುದಾನ ಲಭ್ಯತೆ ಆಧಾರ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಈ) ಸದರಿ ಉದ್ದೇಶಕ್ಕೆ ಅನುದಾನದ ಲಭ್ಯತೆಯ ಆಧಾರದ ಮೇಲೆ ಮೇಲ್ಕಂಡ ಸೌಲಭ್ಯಗಳನ್ನು ಕಲ್ಪಿಸಲಾಗುವುದು.

## ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ

**200 (559) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) :–** ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಾಗಡಿ ಕ್ಷೇತ್ರ ವ್ಯಾಪ್ತಿಯಲ್ಲಿರುವ ಸರ್ಕಾರಿ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಾದರೆ, ಯಾವ್ಯಾವ ಶಾಲೆಗಳಲ್ಲಿ ಎಷ್ಟೆಷ್ಟು ಶಿಕ್ಷಕರ ಕೊರತೆ ಇರುತ್ತದೆ; (ವಿವರ ನೀಡುವುದು)

ಇ) ಯಾವ ಕಾಲಮಿತಿಯಲ್ಲಿ ಕೊರತೆ ಇರುವ ಶಿಕ್ಷಕರನ್ನು ನೇಮಕ ಮಾಡಲಾಗುವುದು?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಹೌದು.

ಆ)

| ಕ್ರ ಸಂ | ಹುದ್ದೆ ಖಾಲಿ ಇರುವ ಶಾಲೆಯ ಹೆಸರು | ವಿಷಯ |
|---|---|---|
| 1 | ಸಪ್ರೌಶಾ ಅರಸನಕುಂಟಿ | ಮುಖ್ಯ ಶಿಕ್ಷಕರು–1<br>ಚಿತ್ರಕಲೆ–1<br>ಕಲಾ–1 |
| 2 | ಸಪ್ರೌಶಾ ಸಂಕೇಘಟ್ಟ | ಪಿ.ಸಿ.ಎಂ–1<br>ಹೂಲಿಗೆ–1 |
| 3 | ಸಪ್ರೌಶಾ ಮಲ್ಲಿಗನಹಳ್ಳಿ | ಹೂಲಿಗೆ–1 |
| 4 | ಸಪ್ರೌಶಾ ಗಂಗೋಸನಹಳ್ಳಿ | ಮುಖ್ಯ ಶಿಕ್ಷಕರು–1<br>ಹಿಂದಿ–1<br>ಸಂಗೀತ–1 |
| 5 | ಸಪ್ರೌಶಾ ಮಾದಿಗೊಂಡನಹಳ್ಳಿ | ಮುಖ್ಯ ಶಿಕ್ಷಕರು–1 |
| 6 | ಸಪ್ರೌಶಾ ಸುಗ್ಗನಹಳ್ಳಿ | ಚಿತ್ರಕಲೆ–1 |
| 7 | ಸಪ್ರೌಶಾ ಶ್ರೀಪತಿಹಳ್ಳಿ | ಸೈ.ಶಿಡೊ–1<br>ಹೂಲಿಗೆ–1 |
| 8 | ಸಪ್ರೌಶಾ ಕಾಗಿಮಡು | ದೈಶಿಶ–1, ಚಿತ್ರಕಲೆ–1 |
| 9 | ಸಪ್ರೌಶಾ ದೊಡ್ಡಬಾಣಿ | ವೃತ್ತಿ ಶಿಕ್ಷಣ ಶಿಕ್ಷಕರು–1 |
| 10 | ಸಪ್ರೌಶಾ ಮಾಡಬಾಳ್ | ಮುಖ್ಯ ಶಿಕ್ಷಕರು–1<br>ದೈಶಿಶ–1 |
| 11 | ಸಜಮೂಶಾ ಮಾಗಡಿ ಟೌನ್ | ಮುಖ್ಯ ಶಿಕ್ಷಕರು–1<br>ಪಿ.ಸಿ.ಎಂ–2 |
| 12 | ಸಪ್ರೌಶಾ ಕಲ್ಯಾಗೇಟ್ (ಬಾಲಕಿ) | ಪಿ.ಸಿ.ಎಂ–1<br>ಸಂಗೀತ–1<br>ದೈಶಿಶ–1 |
| 13 | ಸಪ್ರೌಶಾ ಮಂಚನಬೆಲೆ | ಚಿತ್ರಕಲೆ–1 |
| 14 | ಸಜಮೂಶಾ ಕುದೂರು | ದೈಶಿಶ–1 |
| 15 | ಸಜಪೂಶಾ ತಿಪ್ಪಸಂದ್ರ | ಸೈ.ವಿ.ಜೆಡೊ–1 |
| 16 | ಸಪ್ರೌಶಾ ಶ್ರೀಗಿರಿಪುರ | ಚಿತ್ರಕಲೆ–1 |
| 17 | ಸಪ್ರೌಶಾ ಲಕ್ಕೇನ ಬಡಳ್ಳಿ | ಪಿ.ಸಿ.ಎಂ–1<br>ಹೂಟಿಗಾರಿಕೆ–1 |
| 18 | ಸಪ್ರೌಶಾ ಉರ್ದು ಮಾಗಡಿ | ಹೂಟಿಗಾರಿಕೆ–1 |